

# ಔಷಧ ಸಸ್ಯ ಕೊಡಸಿಗೆ



■ ಚಿತ್ರ ಬರಹ:
ಸಹನಾ ಕಾಂತಬೈಲು

ಬೆಟ್ಟ, ಗುಡ್ಡಗಳಲ್ಲಿ ಬೆಳೆಯುವ ಕೊಡಸಿಗೆ ಒಂದು ಅತ್ಯುತ್ತಮ ಔಷಧೀಯ ಸಸ್ಯ. ಕೊಡಸಿಗೆ ಹೂವು, ಬೀಜ ಮತ್ತು ತೊಗಟೆಯೂ ಔಷಧೀಯ ಗುಣವನ್ನು ಹೊಂದಿದೆ. ಮಾರುಕಟ್ಟೆಯಲ್ಲಿ ದೊರೆಯುವ ಕುಟಜಾರಿಷ್ಟ ಎಂಬ ಔಷಧವನ್ನು ಇದರಿಂದ ತಯಾರಿಸುತ್ತಾರೆ.

ಕೊಡಸಿಗೆ ನಂದಿ ಬಟ್ಟಲಿನ ಜಾತಿಗೆ ಸೇರಿದೆ. ನೆಲದಿಂದ ಸುಮಾರು 25–30 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಇದರ ತೊಗಟೆಯಲ್ಲಿ ಕ್ರಿಮಿನಾಶಕ ಗುಣವಿದೆ. ತೊಗಟೆಯ ಕಷಾಯ ಸೇವನೆಯಿಂದ ಅತಿಸಾರ, ಅಜೀರ್ಣ ನಿವಾರಣೆಯಾಗುತ್ತದೆ.

ಮಲ್ಲಿಗೆಯನ್ನು ಹೋಲುವ ಬಿಳಿ ಬಣ್ಣದ ಕೊಡಸಿಗೆ ಹೂಗಳು ಅತ್ಯಂತ ಆಕರ್ಷಕ. ಹೂವನ್ನು ತುಪ್ಪದೊಂದಿಗೆ ಹುರಿದು ತೆಂಗಿನ ತುರಿಯೊಂದಿಗೆ ರುಬ್ಬಿ ಮಜ್ಜಿಗೆ ಸೇರಿಸಿ ಮಾಡುವ ತಂಬುಳಿ ಅಜೀರ್ಣ, ಅರುಚಿಗೆ ಮದ್ದು. ಬೇಸಿಗೆಯಲ್ಲಿ ಬಿಡುವ ಈ ಹೂವುಗಳನ್ನು ಕೊಯ್ದು ಒಣಗಿಸಿಟ್ಟರೆ ಒಂದು ವರ್ಷಕ್ಕೆ ಕೆಡುವುದಿಲ್ಲ. ಬೇಕಾದಾಗ ಚಟ್ನಿ, ತಂಬುಳಿ ಮಾಡಬಹುದು. ಹಸಿಕೋಡಿನಿಂದ ಮೆಣಸುಕಾಯಿ ಮಾಡಿ ಸೇವಿಸಬಹುದು.

ಕೊಡಸಿಗೆ ಗಿಡವನ್ನು ಹೊಲದ ಅಂಚಿನಲ್ಲಿ, ತೋಟದ ಬದುಗಳಲ್ಲಿಯೂ ಬೆಳೆಸಬಹುದು. ಬೀಜದಿಂದ ಸಸ್ಯಾಭಿವೃದ್ಧಿ ಹೊಂದುತ್ತದೆ. ಕೊಡಸಿಗೆ ಹೂವು, ಬೀಜ ಮತ್ತು ತೊಗಟೆಯಿಂದ ತಯಾರಿಸಿ ಔಷಧಿ ಜ್ವರ, ಬೇಧಿ, ಮೂಲವ್ಯಾಧಿ, ಅಸ್ತಮಾ, ಕಾಮಾಲೆಯಂತಹ ರೋಗ ನಿವಾರಣೆಗೆ ಬಳಕೆಯಾಗುತ್ತದೆ. ಅತಿಸಾರ ನಿವಾರಣೆಯ ಗುಣದಿಂದಾಗಿ ಇಂಗ್ಲಿಷ್‌ನಲ್ಲಿ ಇದಕ್ಕೆ 'ಡಿಸೆಂಟ್ರಿ ರೋಸ್ ಬೆರ್ರಿ' ಎಂಬ ಹೆಸರಿದೆ. ಕೊಡಸಿಗೆಯ ವೈಜ್ಞಾನಿಕ ಹೆಸರು ಹೊಲರ್ರೆನಾ ಆ್ಯಂಟಿಡಿಸೆಂಟರಿಕಾ ಎಂದಿದ್ದು, ಎಪೋಸಿನೇಸಿ ಸಸ್ಯಕುಟುಂಬಕ್ಕೆ ಸೇರಿದೆ.